Starting of new Govt. Junior Colleges in the state

1042(1581)

sri U.B.Banakar (Here Karur)

Will the Hon'bl Minister for primary & Secondary Education be pleased to state

a) Is there any intention to start new Government Junior Colleges by Government During 1998-99 ?

Sri.H.G. Govinda Gowda. (Minister for Primary & Secondary Education.)

a) 'No'

ರಾಜ್ಯದ ಆಯುರ್ವೇದಿಕ್ ಆಸ್ಪತ್ರೆಗಳಲ್ಲಿ ಖಾಲಿಇರುವ ವೈದ್ಯರುಗಳ ಹುದ್ದೆ ಭರ್ತಿ

1044(1576)

ಶ್ರೀ ಜಗದೀಶ ತಿಮ್ಮಣ್ಣಗೌಡ ಪಾಟೀಲ (ಬೀಳಗಿ)

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದ ಅನೇಕ ಆಸ್ಪತ್ರೆಗಳಲ್ಲಿ ಸಾಕಷ್ಟು ಕಡೆ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ರಾಜ್ಯದಲ್ಲಿ ಇರುವ ವೈದ್ಯರ ಒಟ್ಟು ಹುದ್ದೆಗಳೆಷ್ಟು :ಖಾಲಿ ಇರುವ ವೈದ್ಯರ ಸಂಖ್ಯೆ ಎಷ್ಟು ? ಖಾಲಿ

ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಇ) ರಾಜ್ಯದ ಆಯುರ್ವೇದಿಕ್ ಆಸ್ಪತ್ರೆಗಳಲ್ಲಿರುವ ವೈದ್ಯರ ಒಟ್ಟು ಸಂಖ್ಯೆ ಎಷ್ಟು ? ಹಾಗೂ ಆ ಪೈಕಿ ಖಾಲಿ ಇರುವ ಒಟ್ಟು ಸಂಖ್ಯೆ ಎಷ್ಟು?

ಈ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮ ಗಳೇನು ?

ಡಾ ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಸಚಿವರು)

ಅ) ಹೌದು.

ಆ) ರಾಜ್ಯದಲ್ಲಿರುವ ಒಟ್ಟು ವೈದ್ಯರ ಹುದ್ದೆಗಳ ಸಂಖ್ಯೆ : 4788.ಖಾಲಿ ಇರುವ ವೈದ್ಯರ ಹುದ್ದೆಗಳ ಸಂಖ್ಯೆ : 739. 573 ವೈದ್ಯರುಗಳನ್ನು ನೇಮಕಾತಿ ಮಾಡುವ ಕಾರ್ಯ ಪ್ರಕ್ರಿಯೆಯಲ್ಲಿದೆ. ಇನ್ನಷ್ಟು ಖಾಲಿ ಹುದ್ದೆಗಳನ್ನು ಸ್ನಾತ್ತಕೋತ್ತರ ವ್ಯಾಸಂಗವನ್ನು ಪೂರೈಸಿ ನೇಮಕಾತಿ ನಿರೀಕ್ಷಣೆಯಲ್ಲಿರುವ ವೈದ್ಯರುಗಳನ್ನು ನೇಮಕ ಮಾಡಿ ಭರ್ತಿ ಮಾಡಲಾಗುವುದು.

ಗ್ರಾಮಾಂತರ ಪ್ರದೇಶಗಳಲ್ಲಿ ಗುತ್ತಿಗೆ ಆಧಾರದಮೇಲೆ ವೈದ್ಯರನ್ನು ನೇಮಿಸಲು ಜಿಲ್ಲಾಧಿಕಾರಿಗಳಿಗೆ ಸಂಪೂರ್ಣಅಧಿಕಾರವನ್ನು ನೀಡಲಾಗಿದೆ.

ಇ) ರಾಜ್ಯದಲ್ಲಿರುವ ಆಯುರ್ವೇದ ಆಸ್ಪತ್ರೆಗಳಲ್ಲಿ ಮಂಜೂರಾದ ವೈದ್ಯರ ಸಂಖ್ಯೆ ಸಂ:669

ವಿವರ : ವೈದ್ಯರು ದರ್ಜೆ-1-10

ವೈದ್ಯರು ದರ್ಜೆ-2-659

ಖಾಲಿ ಇರುವ ಹುದ್ದೆಗಳ ಸಂಖ್ಯೆ: 102.

ವಿವರ : ವೈದ್ಯರು ದರ್ಜೆ-1-10

ವೈದ್ಯರು ದರ್ಜೆ-2-98

ಈ) ವೈದ್ಯರು ದರ್ಜೆ-1(ಅ)ದ, 4ಹುದ್ದೆಗಳನ್ನು ಪದೋನ್ನತಿಯಿಂದ ಭರ್ತಿಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. ವೈದ್ಯರು ದರ್ಜೆ-2ರ 98 ಖಾಲಿ ಹುದ್ದೆಗಳಲ್ಲಿ 43 ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳಿಂದ ಭರ್ತಿಮಾಡಲು ಹಾಗೂ ಉಳಿದ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಹುಬ್ಬಳ್ಳಿನಗರ ಬಂಗೇರಿಯಲ್ಲಿ ಗ್ರಂಥಾಲಯ ತೆರೆಯುವುದು.

1045(1508)

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ)

ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಧಾರವಾಡ ಜಿಲ್ಲೆಯಲ್ಲಿ ಇರುವ ಗ್ರಂಥಾಲಯಗಳ ಒಟ್ಟು ಸಂಖ್ಯೆ ಎಷ್ಟು:ಅವು ಎಲ್ಲೆಲ್ಲಿ ಇವೆ ? ಇನ್ನು ಅವಶ್ಯಕತೆ ಇರುವ ಗ್ರಂಥಾಲಯಗಳ ಸಂಖ್ಯೆ ಎಷ್ಟು ?

ಆ) ಹಾಗಿದ್ದಲ್ಲಿ ಈ ಗ್ರಂಥಾಲಯಗಳನ್ನು ಎಲ್ಲೆಲ್ಲಿ ತೆರೆಯಲಾಗಿದೆ ಹಾಗೂ ಪ್ರಸಕ್ತ ಇರುವ ಗ್ರಂಥಾಲಯಗಳ ಅಭಿವೃದ್ಧಿಗೆ ಸರ್ಕಾರದ ಯೋಜನೆ ಏನಾದರು ರೂಪಿಸಿದೆಯೇ(ವಿವರ ಒದಗಿಸುವುದು)

ಇ) ಹುಬ್ಬಳ್ಳಿ ನಗರ ಬಂಗೇರಿ ಗ್ರಾಮದಲ್ಲಿ ಗ್ರಂಥಾಲಯದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ ಎಷ್ಟು ಗ್ರಂಥಾಲಯ ಸ್ಥಾಪಿಸಲು ಸರ್ಕಾರ ಕ್ರಮಕ್ಕೆಗೊಳ್ಳುವುದೇ

ಶ್ರೀ. ಆರ್.ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು)

ಅ) ನಗರ ಕೇಂದ್ರ ಗ್ರಂಥಾಲಯ -35 ಶಾಖಾ ಗ್ರಂಥಾಲಯ -08 ವಿವರಗಳ ಪಟ್ಟಿಯನ್ನು ಲಗತ್ತಿಸಿದೆ

ಆ) ಪ್ರತಿ ವರ್ಷ ಹುದ್ದೆಗಳ ಮಂಜೂರಾತಿ ಆಧಾರದ ಮೇಲೆ ನಗರದ ಹೊಸ ಬಡಾವಣೆಗೆ ವಾರ್ಡ್‌ಗೆ ಒಂದರಂತೆ ಗ್ರಂಥಾಲಯಗಳನ್ನು ಪ್ರಾರಂಭಿಸಲು ಯೋಜಿಸಲಾಗಿದೆ. ಹಾಗೂ ಜಿಲ್ಲಾ ಕೇಂದ್ರ ಗ್ರಂಥಾಲಯದ ಅಡಿಯಲ್ಲಿ ತಾಲ್ಲೂಕ ಕೇಂದ್ರ ಪುರಸಭೆ ಮತ್ತು ಗ್ರಾಮ ಪಂಚಾಯ್ತಿ ಕೇಂದ್ರ ಸ್ಥಾನದಲ್ಲಿ ಹಂತ ಹಂತವಾಗಿ ಹಣಕಾಸು ಲಭ್ಯತೆಯನ್ನಾಧರಿಸಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗುವುದು. ಹಾಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಂಥಾಲಯಗಳ ಸೇವೆಯನ್ನು ಆಧುನಿಕರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಹೌದು ಬೆಂಗೇರಿಯಲ್ಲಿ ಗ್ರಂಥಾಲಯ ಪ್ರಾರಂಭಿಸುವ ಬಗ್ಗೆ ಪರಿಗಣಿಸಲಾಗುವುದು